ಕ್ರಮ ಸಂಖ್ಯೆ: ಹುವಿಸಕಂನಿ/ಪ್ರವ್ಯ(ಆ)/ಲೆ(ಆ)/ಸಲೆ(ಆ)/ಆ-2/ಕಾರಕ-5382/2012-13/ C4S-1577 ದಿನಾಂಕ: 4 AUG 2016

# ಅಧೀಕೃತ ಜ್ಞಾಪನ

**ವಿಷಯ:** ಕೆಲಸ ಮಾಡುತ್ತಿರುವ ಸ್ಥಳಗಳಲ್ಲಿ ಮಹಿಳೆಯರಿಗೆ ಆಗುತ್ತಿರುವ ಲೈಂಗಿಕ ಕಿರುಕುಳವನ್ನು ತಡೆಗಟ್ಟಲು ಆಂತರಿಕ ದೂರು ಸಮಿತಿಯ ರಚನೆ ಮಾಡುವ ಕುರಿತು.

**ಉಲ್ಲೇಖ:**
1. ಈ ಕಛೇರಿ ಸಮ ಅಧೀಕೃತ ಜ್ಞಾಪನ ಸಂಖ್ಯೆ: ಸಿವೈಎಸ್ - 2769, ದಿನಾಂಕ: 18.02.2013 ಮತ್ತು ದಿನಾಂಕ: 18.10.2014.
2. ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕಳ(ತಡೆಗಟ್ಟುವಿಕೆ, ನಿಷೇಧಿಸುವಿಕೆ, ನಿವಾರಿಸುವಿಕೆ) ಅಧಿನಿಯಮ, 2013.
3. ಸರ್ಕಾರದ ಅಧೀನ ಕಾರ್ಯದರ್ಶಿ-2, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರ್ಣ ಇಲಾಖೆ ರವರ ಆದೇಶ ಸಂಖ್ಯೆ: ಮಮಇ 28 ರಾಮಆ 2015 ಬೆಂಗಳೂರು, ದಿನಾಂಕ: 18.11.2015.
4. ಈ ಕಛೇರಿ ಆಂತರಿಕ ಟಿಪ್ಪಣಿಯಲ್ಲಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರಿಂದ ನೀಡಿರುವ ಅನುಮೋದನೆ ದಿನಾಂಕ: 04.08.2016.

****

ಉಲ್ಲೇಖ[2] ರ ಅಧಿನಿಯಮ ಮತ್ತು ಉಲ್ಲೇಖ[3] ರ ಆದೇಶದ ಪ್ರಕಾರ ಹುವಿಸಕಂನಿ ಕಂಪನಿ ಕಾರ್ಯಾಲಯದ ವ್ಯಾಪ್ತಿಯಲ್ಲಿ 10 ಕ್ಕಿಂತ ಹೆಚ್ಚು ಮಹಿಳೆಯರು ಕೆಲಸ ಮಾಡುತ್ತಿರುವದರಿಂದ, ಒಂದು **"ಆಂತರಿಕ ದೂರು ಸಮಿತಿ"** ಯನ್ನು, ರಚಿಸುವ ಸಂಬಂಧವಾಗಿ ಈ ಕೆಳಗಿನಂತೆ ಆದೇಶ ಮಾಡಲು ನಿರ್ದೇಶಿತಳಾಗಿರುತ್ತೇನೆ.

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದಲ್ಲಿ ಕೆಲಸ ಮಾಡುತ್ತಿರುವ ಸ್ಥಳಗಳಲ್ಲಿ ಮಹಿಳೆಯರಿಗೆ ಆಗುವ ಲೈಂಗಿಕ ಕಿರುಕುಳವನ್ನು ತಡೆಗಟ್ಟಲು, ಉಲ್ಲೇಖ[1] ರ ಅಧೀಕೃತ ಜ್ಞಾಪನ ಪತ್ರದ ಅನ್ವಯ ಆಡಳಿತ ಕಛೇರಿಯಲ್ಲಿ ರಚಿಸಿರುವ **"ದೂರು ನಿವಾರಣಾ ಸಮಿತಿ"** ಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಲಾಗಿದೆ. ಉಲ್ಲೇಖ[2] ರ ಅಧಿನಿಯಮ ಮತ್ತು ಉಲ್ಲೇಖ[3] ರ ಆದೇಶದಲ್ಲಿ ನೀಡಿರುವ ಮಾರ್ಗಸೂಚಿಗಳಂತೆ ಕಂಪನಿ ಕಾರ್ಯಾಲಯದ ವ್ಯಾಪ್ತಿಯಲ್ಲಿ **"ಆಂತರಿಕ ದೂರು ಸಮಿತಿ"** ಯನ್ನು ತಕ್ಷಣದಿಂದ ಜಾರಿಗೆ ಬರುವಂತೆ, ಈ ಕೆಳ ಕಂಡಂತೆ ರಚಿಸಲಾಗಿದೆ.

| ಕ್ರಮ ಸಂಖ್ಯೆ | ಸಮಿತಿ | ಅಧಿಕಾರಿ ಹೆಸರು ಹಾಗೂ ಪದನಾಮ | ದೂರವಾಣಿ ಸಂಖ್ಯೆ |
|---|---|---|---|
| 1 | ಅಧ್ಯಕ್ಷರು | ಶ್ರೀಮತಿ ಎಮ್. ಶಿಲ್ಪಾ, ಕಾರ್ಯನಿರ್ವಾಹಕ ಇಂಜಿನೀಯರ್(ವಿ) | 94483 70279 |
| 2 | ಸದಸ್ಯರು | ಶ್ರೀಮತಿ ಎಲ್ ಎಮ್. ಪೂರುಹಿತ್, ಸಹಾಯಕ ಲೆಕ್ಕಾಧಿಕಾರಿ, | 94808 81030 |
| 3 | ಸದಸ್ಯರು | ಶ್ರೀಮತಿ ಆರ್. ಆರ್. ನಾಗಮ್ಮನವರ, ಸಹಾಯಕಿ, | 0836 2223895 |
| 4 | ಸದಸ್ಯರು | ಮೆ॥ ಕಿಡ್ಸ್ ಧಾರವಾಡ, ಕಲಮಠ ಕಟ್ಟಡ, ಟಿಕಾರೆ ರಸ್ತೆ, ಧಾರವಾಡ. | 0836 2744196 |

ಸೂಚನೆ:

1. ಸದರಿ ಸಮಿತಿಯು ಲೈಂಗಿಕ ಕಿರುಕುಳ[ತಡೆಗಟ್ಟುವಿಕೆ, ನಿಷೇಧಿಸುವಿಕೆ, ನಿವಾರಿಸುವಿಕೆ] ಅಧಿನಿಯಮ, 2013 ರ ಮೇರೆಗೆ ಕಾರ್ಯ ನಿರ್ವಹಿಸುವುದು.
2. ದಿನಾಂಕ: 18.11.2015 ಸರ್ಕಾರದ ಅಧೀನ ಕಾರ್ಯದರ್ಶಿ-2, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರ್ಣ ಇಲಾಖೆ ರವರ ಆದೇಶದಂತೆ ಕಾರ್ಯ ನಿರ್ವಹಿಸುವುದು.
3. ಸರ್ಕಾರ/ ಕವಿಪ್ರನಿನಿ/ ಹುವಿಸಕಂನಿದಿಂದ ಕಾಲ ಕಾಲಕ್ಕೆ ಹೊರಡಿಸುವ ಸೂತ್ತೋಲೆ/ ಆದೇಶಗಳನ್ವಯ ಕಾರ್ಯ ನಿರ್ವಹಿಸುವುದು ಮತ್ತು ಪಾಲಿಸುವುದು.

[ಪು.ತಿ.ನೋ.]

4. ಸದರಿ ಸಮಿತಿಯ ಸದಸ್ಯರು 3 ವರ್ಷದವರೆಗೆ ಅಧಿಕಾರದಲ್ಲಿರುತ್ತಾರೆ. ಪ್ರತಿ 3 ವರ್ಷಗಳಿಗೊಮ್ಮೆ ಆಂತರಿಕ ದೂರು ಸಮಿತಿಯನ್ನು ಪುನರ ರಚಿಸಬೇಕು. ಹಿಂದಿನ ದೂರು ಸಮಿತಿಯಲ್ಲಿ ಪ್ರತಿನಿಧಿಸದಿದ್ದ ಇಲಾಖೆಗಳಿಗೆ ಪ್ರಾತಿನಿಧ್ಯ ಕೊಡುವಂತೆ ಖಚಿತ ಪಡಿಸಿಕೊಳ್ಳತಕ್ಕದ್ದು.
5. ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳ ಕಂಪನಿ ಕಾರ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅವಧಿಯವರೆಗೆ ಅಥವಾ ಸದರಿ ಸಮಿತಿಯನ್ನು ಪುನರ ರಚಿಸುವ/ ಮಾರ್ಪಾಡಿಸುವ ಆದೇಶದವರೆಗೆ ಚಾಲ್ತಿಯಲ್ಲಿರುತ್ತದೆ.

ಉಲ್ಲೇಖ[3] ರ ಆದೇಶದಲ್ಲಿ ಸಮಿತಿಯ ಸದ್ಯಸರ ಶುಲ್ಕಗಳು ಅಥವಾ ಭತ್ಯೆಗಳು ನಿಗದಿಪಡಿಸಿರುವಂತೆ ಪಾವತಿಸಲು ಮತ್ತು ಕಾಲ ಕಾಲಕ್ಕೆ ಪರಿಷ್ಕರಿಸಿದ್ದಲ್ಲಿ ಪರಿಷ್ಕರಣೆಯಂತೆ ಪಾವತಿಸಬಹುದಾಗಿದೆ.

ಕಂಪನಿ ಕಾರ್ಯಾಲಯದಲ್ಲಿ, ಮಹಿಳಾ ಉದ್ಯೋಗಿಗಳಿಂದ ಯಾವುದೇ ದೂರುಗಳು ಬಂದಲ್ಲಿ, ಅವುಗಳನ್ನು ಕೂಲಂಕುಷವಾಗಿ ವಿಚಾರಣೆ ನಡೆಸಿ, ತೆಗೆದುಕೊಂಡ ನಿರ್ಣಯದ ಕುರಿತು ವರದಿಯನ್ನು ಕ್ಷೀಪ್ರವಾಗಿ ಪ್ರಧಾನ ವ್ಯವಸ್ಥಾಪಕರು[ಆಡಳಿತ ಮತ್ತು ಮಾಸಂಅ] ಮಾಹಿತಿಗಾಗಿ ಮತ್ತು ವಾರ್ಷಿಕ ವರದಿಯನ್ನು ಪ್ರಧಾನ ವ್ಯವಸ್ಥಾಪಕರು[ಆಡಳಿತ ಮತ್ತು ಮಾಸಂಅ] ಹಾಗೂ ಸ್ಥಳೀಯ ಸಮಿತಿಯ ಜಿಲ್ಲಾ-ಅಧಿಕಾರಿ[District Officer] ಗೆ ಕಳುಹಿಸುವಂತೆ ಸೂಚಿಸಲು, ನಿರ್ದೇಶಿತಳಾಗಿದ್ದೇನೆ.

ಪ್ರಧಾನ ವ್ಯವಸ್ಥಾಪಕರು
[ಆಡಳಿತ ಮತ್ತು ಮಾಸಂಅ]

<u>ಪ್ರತಿಯನ್ನು ದಯಾಪರರ ಮಾಹಿತಿಗಾಗಿ ಸಲ್ಲಿಸಿದೆ:</u>

1. ಜಿಲ್ಲಾಧಿಕಾರಿಗಳು, ಧಾರವಡ ಜಿಲ್ಲೆ, ಧಾರವಾಡ.
2. ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ, ನಿಗಮ ಕಾರ್ಯಾಲಯ, ಕಾವೇರಿ ಭವನ, ಬೆಂಗಳೂರು.
3. ನಿರ್ದೇಶಕರು[ಆಡಳಿತ ಮತ್ತು ಮಾಸಂ], ಕವಿಪ್ರನಿನಿ, ನಿಗಮ ಕಾರ್ಯಾಲಯ, ಕಾವೇರಿ ಭವನ, ಬೆಂಗಳೂರು.

<u>ಪ್ರತಿ ಮಾಹಿತಿಗಾಗಿ:</u>

4. ಪ್ರಧಾನ ವ್ಯವಸ್ಥಾಪಕರು[ತಾಂತ್ರಿಕ], ಕಂಪನಿ ಕಾರ್ಯಾಲಯ, ಹುವಿಸಕಂನಿ., ಹುಬ್ಬಳ್ಳಿ.
5. ಅಧೀಕ್ಷಕ ಇಂಜಿನಿಯರ್(ವಿ)[ಟಿ & ಪಿ. / ಪಿ.ಎಮ್.ಸಿ], ಕಂಪನಿ ಕಾರ್ಯಾಲಯ, ಹುವಿಸಕಂನಿ., ಹುಬ್ಬಳ್ಳಿ.
6. ಅಧೀಕ್ಷಕ ಇಂಜಿನಿಯರ್(ವಿ)[ಮಾ.ತಂ], ಕಂಪನಿ ಕಾರ್ಯಾಲಯ, ಹುವಿಸಕಂನಿ., ಹುಬ್ಬಳ್ಳಿ. ರವರ ಮಾಹಿತಿಗಾಗಿ ಹಾಗೂ ಹುವಿಸಕಂನಿ ವೆಬ್ ಸೈಟ್ ನಲ್ಲಿ ಪ್ರಕಟಿಸಲು ಸೂಚಿಸಿದೆ.
7. ನಿಯಂತ್ರಣಾಧಿಕಾರಿ[ಆಂ.ಪ/ ಕಂ.ಲೆ], ನಿಗಮ ಕಛೇರಿ, ಹುವಿಸಕಂನಿ., ಹುಬ್ಬಳ್ಳಿ.
8. ಎಲ್ಲಾ ಕಾರ್ಯನಿರ್ವಾಹಕ ಇಂಜಿನೀಯರ(ವಿ)(ಕಾ)/ ಉಪ ಲೆಕ್ಕನಿಯಂತ್ರಣಾಧಿಗಳು, ಕಂಪನಿ ಕಾರ್ಯಾಲಯ, ಹುವಿಸಕಂನಿ., ಹುಬ್ಬಳ್ಳಿ.
9. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ)/ ಲೆಕ್ಕಾಧಿಕಾರಿಗಳು, ಕಂಪನಿ ಕಾರ್ಯಾಲಯ, ಹುವಿಸಕಂನಿ., ಹುಬ್ಬಳ್ಳಿ.
10. ಎಲ್ಲಾ ಸಹಾಯಕ ಇಂಜಿನೀಯರ(ವಿ)/ ಸಹಾಯಕ ಲೆಕ್ಕಾಧಿಕಾರಿಗಳು, ಕಂಪನಿ ಕಾರ್ಯಾಲಯ, ಹುವಿಸಕಂನಿ., ಹುಬ್ಬಳ್ಳಿ.
11. ಆಪ್ತ ಕಾರ್ಯದರ್ಶಿಗಳು[ವ್ಯ.ನಿ./ ನಿ.[ತಾಂ]/ ಮು.ಆ.ಅ], ಕಂಪನಿ ಕಾರ್ಯಾಲಯ, ಹುವಿಸಕಂನಿ., ಹುಬ್ಬಳ್ಳಿ – ಮಾಹಿತಿಗಾಗಿ ಮತ್ತು ಮಾನ್ಯರ ಗಮನಕ್ಕೆ ತರಲು ಕೋರಿದೆ.
12. ಕಂಪನಿ ಕಛೇರಿಯ ಎಲ್ಲಾ ಶಾಖೆಗಳಿಗೆ.
13. ಸಂಬಂಧಿಸಿದ ಅಧಿಕಾರಿ/ ಸಿಬ್ಬಂದಿಗಳಿಗೆ.
14. ಮೆ॥ ಕಿಡ್ಸ್ ಧಾರವಾಡ, ಕಲಮಠ ಕಟ್ಟಡ, ಟಿಕಾರೆ ರಸ್ತೆ, ಧಾರವಾಡ.
15. ಸೂಚನಾ ಪಲಕಕ್ಕೆ.
16. ಕಛೇರಿ ಪ್ರತಿ/ ಮಹಾ ಕಡತ.